## ಜೀವಂತ ದಂತಕಥೆ

# ಸುಭದ್ರಮ್ಮ ಮನ್ಸೂರು

ಎಂಬತ್ತೊಂದು ವರ್ಷದ ಸುಭದ್ರಮ್ಮ ಮನ್ಸೂರು ಅವರ ಅಭಿನಯ, ಹಾಡುಗಾರಿಕೆಗೆ ಮುಪ್ಪು ಬಂದಿಲ್ಲ. ಅನುಪಮ ಅಭಿನೇತ್ರಿಯ ಆ ಉತ್ಸಾಹ ಕುಂದಿಲ್ಲ ಎಂಬುದೇ ಒಂದು ಸಂತಸದ ಸೋಜಿಗ!

■ ಗುಡಿಹಳ್ಳಿ ನಾಗರಾಜ



ಸುಭದ್ರಮ್ಮ ಮನ್ಸೂರು ಕಳೆದ ಡಿಸೆಂಬರ್ 22ರಂದು ಬಳ್ಳಾರಿಯಲ್ಲಿ ಮಲ್ಲಮ್ಮಳಾಗಿ ತಮ್ಮ ಎಂದಿನ ಭಾವಪೂರ್ಣ ಅಭಿನಯ ನೀಡಿದರು. ಅದಕ್ಕೆ ಮೊದಲು, ಎಂಟು ತಾಸಿನ ಸುದೀರ್ಘ ಅವಧಿಯ 'ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ' ನಾಟಕದ ಮಲ್ಲಮ್ಮಳಾಗಿ ಅಕ್ಟೋಬರ್ 14ರಂದು ಬಳ್ಳಾರಿ ಸಮೀಪದ ಲಿಂಗದಹಳ್ಳಿಯಲ್ಲಿ ಅನಾಯಾಸವಾಗಿ ನಟಿಸಿದರು. ಕಳೆದ ಹತ್ತು ವರ್ಷಗಳಿಂದ ಅವರು ಹೆಚ್ಚು ಅಭಿನಯಿಸುತ್ತಿರುವುದು 'ರಕ್ತರಾತ್ರಿ', 'ಮಲ್ಲಮ್ಮ' ನಾಟಕಗಳಲ್ಲಿ. ಪುಟಗಟ್ಟಲೆ ಸಂಭಾಷಣೆಯ ಕಾವ್ಯಮಯವಾದ ಕ್ಲಿಷ್ಟ ಭಾಷೆಯ ಕಂದಗಲ್ಲ ಹಣಮಂತರಾಯರ 'ರಕ್ತರಾತ್ರಿ'ಯ ದ್ರೌಪದಿ ಪಾತ್ರದಲ್ಲಿ ಅಭಿನಯಿಸಲು ಯುವಕರ ಶಕ್ತಿಸಾಮರ್ಥ್ಯ ಬೇಕು. ಅಮ್ಮನಲ್ಲಿ ಅದು ಎಂದಿನಿತೂ ಕುಂದಿಲ್ಲ.